

بِسْمِ اللّٰہِ الرَّحْمٰنِ الرَّحِیم

# ಯುರೋಪಿಯನ್ ಪ್ರವಾಸ – 2019

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 01–11–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಕೆಲವು ದಿನಗಳಲ್ಲಿ ಯುರೋಪಿನ ಕೆಲವು ದೇಶಗಳಿಗೆ ಪ್ರವಾಸ ಮಾಡಿದ್ದೆನು. ಫ್ರಾನ್ಸ್ ಮತ್ತು ಹಾಲೆಂಡಿನಲ್ಲಿ ಜಲ್ಸ ಸಾಲಾನ ಸಹ ಇದ್ದುವು. ಮಸ್‌ಜಿದ್‌ಗಳ ಉದ್ಘಾಟನೆ ಮತ್ತು ಇತರ ಕಾರ್ಯಕ್ರಮಗಳು ಇದ್ದವು. ಅನ್ಯರೊಂದಿಗೆ ಸಹ ಕೆಲವು ಕಾರ್ಯಕ್ರಮಗಳು ಇದ್ದುವು. ಫ್ರಾನ್ಸಿನಲ್ಲಿ ಯುನಿಸ್ಕೋದ ಕಟ್ಟಡದಲ್ಲಿ ಕಾರ್ಯಕ್ರಮ ಜರಗಿಸಲಾಯಿತು. ಅದರಲ್ಲಿ ಇಸ್ಲಾಮಿ ತತ್ವಗಳನ್ನು ವಿವರಿಸಲು, ಶೈಕ್ಷಣಿಕ ಮತ್ತು ವೈಜ್ಞಾನಿಕ ಬೆಳವಣಿಗೆಗೆ ಮುಸ್ಲಿಮರು ನೀಡಿದ ಕೊಡುಗೆಗಳ ಬಗ್ಗೆ ಸಹ ವಿವರಿಸಲು ಭಾಗ್ಯ ಲಭಿಸಿತು. ಅದೇರೀತಿ ಬರ್ಲಿನ್ ನಗರದಲ್ಲಿ ಒಂದು ಕಾರ್ಯಕ್ರಮದಲ್ಲಿ ರಾಜಕಾರಣಿಗಳಿಗೆ ಮತ್ತು ವಿದ್ಯಾಸಂಪನ್ನರಾದ ಜನರಿಗೆ ಇಸ್ಲಾಮೀ ತತ್ವಗಳನ್ನು ವಿವರಿಸಿಕೊಡಲಾಯಿತು. ಅವರ ಮೇಲೆ ಅದು ಬಹಳ ಗುಣಾತ್ಮಕ ಪ್ರಭಾವ ಬೀರಿತು. ನಾನು ಈಗ ಕೆಲವು ಅನ್ಯರ ಅನಿಸಿಕೆಗಳನ್ನು ವಿವರಿಸುವೆನು. ಅವುಗಳಿಂದ ಅಲ್ಲಿ ಅವರಿಗೆ ಇಸ್ಲಾಮಿನ ನೈಜ ತತ್ವಗಳನ್ನು ಮನವರಿಕೆ ಮಾಡಲು ಸಂದರ್ಭ ಲಭಿಸಿತು ಎಂದು ತಿಳಿಯುತ್ತದೆ.

ಹಾಲೆಂಡಿನಲ್ಲಿ ಜಲ್ಸದ ಎರಡನೆಯ ದಿನ ಒಂದು ಕಾರ್ಯಕ್ರಮದಲ್ಲಿ ಡಚ್ ಅತಿಥಿಗಳನ್ನು ಸಂಬೋಧಿಸಲು ಸಂದರ್ಭ ಲಭಿಸಿತು. 125 ಮುಸ್ಲಿಮೇತರ ಡಚ್ ಅತಿಥಿಗಳು ಅದರಲ್ಲಿ ಭಾಗವಹಿಸಿದರು. ರೋಟರ್‌ಡಮ್ ನಗರದಿಂದ ಆಗಮಿಸಿದ ಹೇಮನ್ ಮೇಟರ್ ಸಾಹಿಬ್ ಹೇಳಿದರು: ಜಲ್ಸಕ್ಕೆ ಆಗಮಿಸುವ ಮೊದಲು ಗಾಬರಿ ಹೊಂದಿದ್ದೆ. ಈ ಜಲ್ಸದಲ್ಲಿ ಮುಸ್ಲಿಮರು ಜಮಾಯಿಸುತ್ತಿರುವುದರಿಂದ ಏನಾಗುವುದೆಂದು ತಿಳಿಯದು ಎಂದು ನಾನು ಭಾವಿಸಿದ್ದೆ. ಆದರೆ ಇಲ್ಲಿಗೆ ಬಂದ ನಂತರ ಬಹಳ ಆಶ್ಚರ್ಯವಾಯಿತು. ಇಲ್ಲಿ ಶಾಂತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಪೋಪರು ಸಾಮಾನ್ಯ ರೂಪದಲ್ಲಿ ಶಾಂತಿಯ ಬಗ್ಗೆ ಮಾತನಾಡುತ್ತಾರೆ. ಆದರೆ ನಿಮ್ಮ ಖಲೀಫರು ಬಹಿರಂಗವಾಗಿ ಶಕ್ತಿಶಾಲಿ ಕೋಮುಗಳನ್ನು ಸಂಬೋಧಿಸಿ ಮಾತನಾಡಿದ್ದಾರೆ.

ಒಂದು ಡಚ್ ದಂಪತಿ ಜಲ್ಸದಲ್ಲಿ ಭಾಗವಹಿದ್ದರು. ಅವರಿಬ್ಬರೂ ಹೇಳುತ್ತಾರೆ: ಜಲ್ಸದ ಪರಿಸರ ವಿಸ್ಮಯಕರವಾಗಿತ್ತು. ಎಲ್ಲಾ ಜನರು ಸದ್ಗುಣ ಸಂಪನ್ನರಾಗಿದ್ದರು. ಸ್ವರ್ಗ ಸಮಾನ ಪರಿಸರ ಇಲ್ಲಿತ್ತು. ನನ್ನ ಭಾಷಣದ ಬಗ್ಗೆ ಹೇಳಿದರು: ಭಾಷಣ ನಮ್ಮ ಮೇಲೆ ಬಹಳ ಪ್ರಭಾವ ಬೀರಿತು. ಭಾಷಾಂತರ ಮಾಡಿದವರು ಸಹ ನಮ್ಮ ಮೇಲೆ ಬಹಳ ಪ್ರಭಾವ ಬೀರಿದರು. ಭಾಷಣದ ಜೊತೆಗೆ ಬಹಳ ಉತ್ತಮವಾದ ಭಾಷಾಂತರವೂ ಜಾರಿಯಲ್ಲಿತ್ತು ಎಂದು ಹೇಳಿದರು. ಇದು ಭಾಷಾಂತರಗಾರರನ್ನು ಹೊಂದಿಕೊಂಡಿದೆ. ಎಂ.ಟಿ.ಎ.ದಲ್ಲಿ ಭಾಷಾಂತರ ವಿಭಾಗವಿದೆ. ಅದರೊಂದಿಗೆ ವಿವಿಧ ದೇಶಗಳಲ್ಲಿಯೂ ಭಾಷಾಂತರವನ್ನು ಸರಿಯಾದ ರೀತಿಯಲ್ಲಿ ಅಲ್ಲಿ ಜಲ್ಸಗಳೂ ಕಾರ್ಯಕ್ರಮಗಳೂ ಜರಗುವಾಗ ನಿರ್ವಹಿಸಬೇಕು.

ಡೇನಿ ಹಾರ್ಟ್‌ಕಿಂಗ್ ಸಾಹಿಬ್ ಎಂಬ ಅತಿಥಿ ಹೇಳುತ್ತಾರೆ: ನನಗೆ ಇಲ್ಲಿ ಬಹಳ ಒಳ್ಳೆಯದು ಭಾಸವಾಗುತ್ತಿದೆ. ನಿಮ್ಮ ಖಲೀಫರು ಶಾಂತಿ ಮತ್ತು ಪರಸ್ಪರ ಸೌಹಾರ್ದದ ಬಗ್ಗೆ ಮಾತನಾಡುತ್ತಾರೆ. ನಿಮ್ಮ ಜಮಾಅತ್ ಅಹ್ಮದಿಯರೊಂದಿಗೆ ಮಾತ್ರವಲ್ಲ ಪ್ರತಿಯೊಂದು ಧರ್ಮದವರೊಂದಿಗೆ ಉತ್ತಮವಾಗಿ ವರ್ತಿಸುತ್ತಿದೆ. ನೀವು ಲೋಕದಾದ್ಯಂತ ಹಬ್ಬಿರುವ ಅಶಾಂತಿ ಬಗ್ಗೆ ಮಾತನಾಡಿರುವಿರಿ ಮತ್ತು ಶಾಂತಿಯನ್ನು ಸ್ಥಾಪಿಸುವ ಬಗ್ಗೆ ಒತ್ತಿ ಹೇಳಿರುವಿರಿ. ನಾವು ಇದರ ಬಗ್ಗೆ ಪ್ರಯತ್ನಿಸಬೇಕು. ನಾವೆಲ್ಲರೂ ಸೇರಿಕೊಂಡು ಶಾಂತಿ ಸ್ಥಾಪಿಸಬೇಕು.

ಹಾಲೆಂಡಿನ ಅಲ್‌ಮೇರೆ ನಗರದಲ್ಲಿ ಮಸ್‌ಜಿದ್ ಉದ್ಘಾಟನೆಯ ಸಮಾರಂಭದಲ್ಲಿ ಅಲ್‌ಮೇರೆ ಚರ್ಚಿನ ಚೆಯರ್‌ಮೇನ್ ಆಗಮಿಸಿದ್ದರು. ಅವರು ಹೇಳಿದರು: ನಿಮ್ಮ ಜಮಾಅತಿನ ಸಂದೇಶ ಶಾಂತಿಯ ಸಂದೇಶವಾಗಿದೆ. ನಿಮ್ಮ ಖಲೀಫರು ಶಾಂತಿ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಬಹಳ ಉತ್ತಮ ಭಾಷಣ ಮಾಡಿದರು. ಅಲ್‌ಮೇರೆ ನಗರದಲ್ಲಿ ಕೆಥೋಲಿಕರೂ ಪ್ರೊಟೆಸ್ಟೆಂಟ್ ಪಂಗಡದವರೂ ಶಾಂತಿಯಿಂದ ಜೀವಿಸುತ್ತಿದ್ದಾರೆ. ಈಗ ಅಹ್ಮದಿಯರು ಸಹ ನಮ್ಮೊಂದಿಗೆ ಸೇರಿ ಶಾಂತಿಯಿಂದ ಜೀವಿಸುವರೆಂದು ಪ್ರತೀಕ್ಷಿಸುತ್ತಿದ್ದೇನೆ. ಒಬ್ಬ ಸ್ಥಳೀಯ ಮಹಿಳೆ ಎವಲಿನ್ ಸಾಹಿಬ ಹೇಳುತ್ತಾರೆ: ದುಃಖಕರವಾದುದೇನೆಂದರೆ ಲೋಕಕ್ಕೆ ಇಸ್ಲಾಮಿನ ಈ ಚಿತ್ರವು ತೋರಿಸಲ್ಪಡುವುದಿಲ್ಲ. ನಿಮ್ಮ ಜಮಾಅತಿನ ಜನರು ಬಹಳ ಪರಿಶ್ರಮ ಪಡುವವರೂ ಅತಿಥಿ ಸತ್ಕಾರ ಮಾಡುವವರೂ ಆಗಿದ್ದಾರೆ ಎಂದು ಹೇಳಿದರು.

ಅನಂತರ ಫ್ರಾನ್ಸಿನ ಪ್ರವಾಸ ಇತ್ತು, ಅಲ್ಲಿ ಸಹ ಅಹ್ಮದಿಯೇತರ, ಮುಸ್ಲಿಮೇತರ ಅತಿಥಿಗಳೊಂದಿಗೆ ಒಂದು ಸಭೆಯಲ್ಲಿ ಭಾಗವಹಿಸಿದೆ. ಅಲ್ಲಿಗೆ ಅಂದಾಜು 75 ಅತಿಥಿಗಳು ಆಗಮಿಸಿದ್ದರು. ಒಬ್ಬ ಅತಿಥಿ ಮಹಿಳೆ ಹೇಳಿದರು: ಫ್ರಾನ್ಸಿನಲ್ಲಿ ನಡೆದ ವಿವಿಧ ಆಕ್ರಮಣಗಳನ್ನು ಖಲೀಫರು ಖಂಡಿಸಿ ಅವುಗಳಿಗೆ ಇಸ್ಲಾಮಿನೊಂದಿಗೆ ಯಾವ ಸಂಬಂಧವೂ ಇಲ್ಲ ಎಂದು ಸ್ಪಷ್ಟೀಕರಿಸಿರುವರು. ಅಹ್ಮದಿಯಾ ಜಮಾಅತಿನ ಇಮಾಮರು ಇಸ್ಲಾಮಿನ ನೈಜ ಚಿತ್ರ ನಮ್ಮ ಮುಂದೆ ಇರಿಸಿದ್ದಾರೆ. ಅದರಿಂದ ತಿಳಿಯುವುದೇನೆಂದರೆ ಮುಸ್ಲಿಮರು ಸುಲಭವಾಗಿ ಪಾಶ್ಚಿಮಾತ್ಯ ಲೋಕದೊಂದಿಗೆ ಭಾವೈಕ್ಯ ಹೊಂದಬಹುದೆಂದು. ಅವರು ಪುನಃ ಹೇಳಿದರು: ಪಾಶ್ಚಿಮಾತ್ಯ ಲೋಕದಲ್ಲಿ ಇಸ್ಲಾಮಿಗೆ ಯಾವ ಸ್ಥಾನವೂ ಇಲ್ಲ ಮತ್ತು ಮುಸ್ಲಿಮರು ಅಲ್ಲಿ ಜೊತೆ ಸೇರಿ ಜೀವಿಸಲು ಸಾಧ್ಯವಿಲ್ಲ ಎಂದು ಹೇಳುವವರು ತಪ್ಪು

ಹೇಳುತ್ತಿದ್ದಾರೆ. ಅಂತಹ ಜನರು ಇಲ್ಲಿ ಮಾಡಿದ ಭಾಷಣಗಳನ್ನು ಆಲಿಸಬೇಕಾಗಿತ್ತು.

ಮರಾಕೇಶ್ ದೇಶದ ಒಬ್ಬ ಅಹ್ಮದಿಯೇತರ ಅತಿಥಿ ಸುಫ್‌ಯಾನ್ ಸಾಹಿಬ್ ಹೇಳಿದರು: ಇಂದಿನ ಭಾಷಣ ಆಲಿಸಿದಾಗ ನನಗೆ ಮನವರಿಕೆಯಾಯಿತು ನೀವೇ ವಾಸ್ತವಿಕ ಮತ್ತು ನೈಜ ಮುಸ್ಲಿಮರೆಂದು. ನೀವು ಮುಸ್ಲಿಮರಲ್ಲ ಎಂದು ಹೇಳುವವರು ಸುಳ್ಳು ಹೇಳುತ್ತಿದ್ದಾರೆ.

ಅಕ್ಟೋಬರ್ ದಿನಾಂಕ 8ರಂದು ಯುನೆಸ್ಕೋದಲ್ಲಿ ಸಮಾರಂಭವಿತ್ತು. ಅದರಲ್ಲಿ 91 ಅತಿಥಿಗಳು ಭಾಗವಹಿಸಿದರು. ಮಾಲಿದೇಶದಿಂದ ಯುನೆಸ್ಕೋ ಅಂಬಾಸಿಡರ್ ಆಗಿರುವ ಉಮರ್ ಖೈದಾ ಸಾಹಿಬ್ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ಶಾಂತಿಯನ್ನು ಹರಡುತ್ತಿದ್ದಾರೆ. ನೀವು ನೀಡಿದ ಶಾಂತಿಯ ಸಂದೇಶದ ಕಾರಣದಿಂದ ತಮಗೆ ಶುಭಾಶಯ ಅರ್ಪಿಸುತ್ತೇನೆ. ಜಾಗತಿಕ ನ್ಯಾಯಪಾಲನೆ ಮತ್ತು ಸೌಹಾರ್ದದ ಬಗ್ಗೆ ಅಹ್ಮದಿಯಾ ಜಮಾಅತಿನ ಇಮಾಮರು ನಮ್ಮ ಮುಂದಿರಿಸಿದ ಚಿತ್ರಣದ ಆವಶ್ಯಕತೆ ಲೋಕಕ್ಕೆ ತೀವ್ರವಾಗಿ ಇದೆ ಎಂದು ಹೇಳಿದರು. ನೇಟೋ ಮೆಮೋರಿಯಲ್ ಅಧ್ಯಕ್ಷ ಮಿಸ್ಟರ್ ಬ್ರೆಂಟನ್ ಹೇಳಿದರು: ಈ ಸಭೆ ಮಹತ್ವಪೂರ್ಣವೂ ಚಾರಿತ್ರಿಕವೂ ಆಗಿದೆ. ಇದರಿಂದ ಶಾಂತಿ, ಸೌಹಾರ್ದ, ಭ್ರಾತೃತ್ವ ಸ್ಥಾಪಿತವಾಗಲು ಸಾಧ್ಯ. ಅಹ್ಮದಿಯಾ ಜಮಾಅತಿನ ಇಮಾಮರ ಸಂದೇಶ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಜನರು ಆಲಿಸಬೇಕು ಎನ್ನುವುದು ನನ್ನ ಅಭಿಲಾಷೆಯಾಗಿದೆ.

ಫ್ರಾನ್ಸಿನಲ್ಲಿ ಮಾಲಿ ದೇಶದೊಂದಿಗೆ ಸಂಬಂಧ ಹೊಂದಿದ ಕೆಥೋಲಿಕರ ಎಸೋಸಿಯೇಶನಿನ ಅಧ್ಯಕ್ಷ ದಯಾಲೂ ಸಾಹಿಬ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರು ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ಪ್ರತಿಪಾದಿಸುತ್ತಿರುವ ಇಸ್ಲಾಮ್ ಲೋಕದಲ್ಲಿ ಸ್ಥಾಪಿತವಾಗುವುದಾದರೆ ಲೋಕದ ಎಲ್ಲಾ ಸಮಸ್ಯೆಗಳು ಕೊನೆಗೊಳ್ಳುವುವು.

ಅನಂತರ ಫ್ರಾನ್ಸಿನ ಸ್ಟ್ರಾಸ್ ಬರ್ಗ್‌ನಲ್ಲಿ ಮಸ್‌ಜಿದ್ ಉದ್ಘಾಟಿಸಲಾಯಿತು. ಅಲ್ಲಿ ಅಂದಾಜು 191 ಅತಿಥಿಗಳು ಭಾಗವಹಿಸಿದರು. ಫ್ರೆಂಚ್ ಪಾರ್ಲಿಮೆಂಟಿನ ಸದಸ್ಯೆ ಮಾರ್ಟಿನ್ ಸಾಹಿಬ ಹೇಳಿದರು: ನಾನು ಬಹಳ ಸಂತೋಷಪಡುತ್ತೇನೆ. ತಾವು ಒಂದು ಪರಿಪೂರ್ಣ ಸಂದೇಶ ನೀಡಿದಿರಿ. ಶಾಂತಿಯ, ಭ್ರಾತೃತ್ವದ ಸಂದೇಶ ನೀಡಿದಿರಿ. ಈ ಸಂದೇಶ ಸರ್ವ ಲೋಕಕ್ಕೋಸ್ಕರವಾಗಿದೆ. ಖಲೀಫರು ಪ್ರಸ್ತಾಪಿಸಿದ ಮೂಲ ಮತ್ತು ನೈಜ ಇಸ್ಲಾಮನ್ನು ಫ್ರೆಂಚ್ ಜನರು ಅರಿತುಕೊಳ್ಳುವ ಆವಶ್ಯಕತೆ ಇದೆ. ಒಬ್ಬ ಅತಿಥಿ ಹೇಳಿದರು: ನನಗೆ ನನ್ನ ಭಾವನೆಗಳನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಇಸ್ಲಾಮಿನ ಈ ಸಂಘಟನೆ ಬಗ್ಗೆ ನನಗೆ ಇದರ ಮೊದಲು ತಿಳಿದಿರಲಿಲ್ಲ. ನಾನು ಇಲ್ಲಿ ಏನನ್ನು ಆಲಿಸಿದೆನೋ ಅದನ್ನು ಪ್ರಶಂಸಿಸದೆ ಇರಲಾರೆ. ಇಸ್ಲಾಮಿನ ಈ ಶಾಖೆ ಶಾಂತಿಪ್ರಿಯ ಶಾಖೆಯಾಗಿದೆ. ಇದು ಇಸ್ಲಾಮಿನ ಮೂಲ ಚಿತ್ರವಾಗಿದೆ. ಇದು ಎಂತಹ ಇಸ್ಲಾಮ್ ಎಂದರೆ ಅದರಲ್ಲಿ ಮಾನವೀಯತೆ ಇದೆ, ಪ್ರೀತಿ ವಾತ್ಸಲ್ಯ ಇವೆ ಎಂದು ನಾನು ತಿಳಿದಿದ್ದೇನೆ. ನಮಗೆ ಹಿಂದೆ ಪರಿಚಯಿಸುತ್ತಿದ್ದ ಇಸ್ಲಾಮ್ ಅವು ಇಸ್ಲಾಮ್ ಅಲ್ಲ. ಅದು ಬೇರೆಯೇ ಒಂದು ವಸ್ತುವಾಗಿದೆ.

ಅಕ್ಟೋಬರ್ 14ರಂದು ಜರ್ಮನಿಯ ಪೇರ್ಝ್ ಬಾದನ್‌ನಲ್ಲಿ ಮಸ್‌ಜಿದ್ ಉದ್ಘಾಟಿಸಲಾಯಿತು. ಅದರಲ್ಲಿ ಭಾಗವಹಿಸಿದ ಅತಿಥಿಗಳ ಸಂಖ್ಯೆ 370 ಆಗಿತ್ತು. ಕೆಥೋಲಿಕ್ ಚರ್ಚಿನ ಒಬ್ಬ ಪಾದರಿ ಹೇಳಿದರು: ನೀವು ಮಾಡಿದ ಭಾಷಣದಲ್ಲಿ ಪ್ರಕಟಿಸಿದ ಅಭಿಪ್ರಾಯಗಳ ಬಗ್ಗೆ ನಾನು ಪರಿಪೂರ್ಣ ಸಹಮತ ಹೊಂದಿದ್ದೇನೆ. ಲೋಕದ ಎಲ್ಲಾ ನಾಯಕರು ಶಾಂತಿಯ ಬಗ್ಗೆ ಭಾಷಣ ಮಾಡುವುದಾದರೆ ಬಹಳ ಚೆನ್ನಾಗಿತ್ತು. ಒಬ್ಬ ಮಹಿಳೆ ಊನಿ ಸಾಹಿಬ ವೇರ್ಝ್ ಬಾದನ್ ಪಾರ್ಲಿಮೆಂಟಿನಲ್ಲಿ ಇಂಟೆಗ್ರೇಶನ್ ವಿಭಾಗದ ಉದ್ಯೋಗಿಯಾಗಿದ್ದಾರೆ. ಅವರು ಹೇಳಿದರು: ಈ ಭಾಷಣ ಅತ್ಯಂತ ಧೈರ್ಯ ನೀಡುವುದಾಗಿತ್ತು. ಒಂದು ಮಾತು ಅತ್ಯಂತ ಮಹತ್ವ ಪೂರ್ಣವಾಗಿದೆ. ನಾನು ಆ ಮಾತನ್ನು ಮರೆತು ಬಿಡಲಾರೆ. ಅದೇಂದರೆ ಎಲ್ಲಾ ಅಹ್ಮದಿಯರು ತಮ್ಮ ಪರಿಸರಕ್ಕೆ ಪ್ರಯೋಜನಕರರಾಗಿರಬೇಕು ಎಂಬುದು. ಮುಸ್ಲಿಮರ ಎಲ್ಲಾ ಪಂಗಡಗಳು ನಿಮ್ಮ ಹಾಗೆ ತೆರೆದ ಮನಸ್ಸಿನವರಾಗಿರುತ್ತಿದ್ದರೆ ನಾವು ಜೊತೆ ಸೇರಿ ಜೀವಿಸುವುದು ಬಹಳ ಸುಲಭವಾಗುತ್ತಿತ್ತು.

ನಾನು ಒಂದು ವಿಷಯ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ನಾವು ಅನ್ಯರ ಜೊತೆ ಸೇರಿ ಜೀವಿಸುತ್ತೇವೆ. ಆದರೆ ಕೆಲವರು ಕೆಲವು ಸಾರಿ ಅನ್ಯರನ್ನು ಮೆಚ್ಚಿಸುವ ಮಾತುಗಳನ್ನು ಆಡುತ್ತಾರೆ. ನೀವು ನಿಮ್ಮ ಧರ್ಮದ ಉಪದೇಶಗಳಿಗೆ ಅನುಸಾರವಾಗಿ ಮಾತನಾಡಬೇಕು. ಅವರ ಸ್ವಭಾವ ಗುಣಗಳನ್ನು ಅನುಸರಿಸಿ ನಿಮ್ಮ ಧರ್ಮದ ಉಪದೇಶಗಳನ್ನು ಅವರಿಗೆ ತಿಳಿಸಬಹುದು. ಹೆದರುವ ಆವಶ್ಯಕತೆ ಇರುವುದಿಲ್ಲ. ಇಂಟೆಗ್ರೇಶನ್ (ಭಾವೈಕ್ಯ) ಎಂದರೆ ಅತ್ಯುತ್ತಮ ಸ್ವಭಾವ ಗುಣ ಪ್ರಕಟಿಸಿ ಇಸ್ಲಾಮ್ ಧರ್ಮ ತತ್ವಗಳನ್ನು ವಿವರಿಸಿ ಕೊಡುವುದಾಗಿದೆ.

ಅನಂತರ ಫಲ್‌ಡದಲ್ಲಿ ಮಸ್‌ಜಿದ್ ಬೈತುಲ್ ಹಮೀದ್ ಉದ್ಘಾಟಿಸಲಾಯಿತು. ಈ ಸಮಾರಂಭದಲ್ಲಿ 330 ಅತಿಥಿಗಳು ಭಾಗವಹಿಸಿದರು. ಹಾರಲ್ ಸಾಹಿಬ್ ಎಂಬ ಓರ್ವ ಅತಿಥಿ ಹೇಳಿದರು: ಇದರ ಮೊದಲು ಇಸ್ಲಾಮ್ ಧರ್ಮದ ಬಗ್ಗೆ ನಮಗೆ ತಿಳಿದಿದ್ದ ಮಾಹಿತಿಗಳು ಇಸ್ಲಾಮಿನ ಸರಿಯಾದ ಚಿತ್ರ ನೀಡುತ್ತಿರಲಿಲ್ಲ. ಆದುದರಿಂದ ಇಂದಿನ ಸಂಜೆ ನನಗೆ ಗುಣಾತ್ಮಕವಾದ ಶಾಂತಿ ಭರಿತ ಸಂದೇಶ ತಂದಿತು. ಒಬ್ಬ ಸ್ಥಳೀಯ ಟೀಚರ್ ಹೇಳಿದರು: ಈ ಭಾಷಣವನ್ನು ವಿದ್ಯಾರ್ಥಿಗಳಿಗೆ ಕೇಳಿಸಿ ಅವರೊಂದಿಗೆ ವಿಚಾರಿಸಬೇಕು ನೀವು ಇದರಿಂದ ಏನನ್ನು ಮನವರಿಕೆ ಮಾಡಿದಿರಿ. ಈ ಸುಂದರ ಉಪದೇಶಗಳು ಯಾವ ಧರ್ಮದ ಉಪದೇಶಗಳಾಗಿರಬಹುದು ಎಂದು ಕೇಳಬೇಕು.

ಅನಂತರ ಬರ್ಲಿನ್‌ನಲ್ಲಿ ಇಸ್ಲಾಮ್ ಮತ್ತು ಯುರೋಪ್ ಎಂಬ ವಿಷಯದ ಬಗ್ಗೆ ಭಾಷಣ ಮಾಡಲಾಗಿತ್ತು. ಪಾರ್ಲಿಮೆಂಟ್ ಸದಸ್ಯ ಅಲೆಕ್ಸಾಂಡರ್ ಹೇಳುತ್ತಾರೆ: ಈ ವಿಷಯ ಹೊಸದಾಗಿತ್ತು ಮತ್ತು ಪ್ರಚಲಿತ ಆವಶ್ಯಕತೆಗಳಿಗೆ ಅನುಸಾರವಾಗಿತ್ತು. ಖಲೀಫರು ತಮ್ಮ ನಿಲುವನ್ನು ಪುರಾತನ ಇಸ್ಲಾಮೀ ಮೂಲಗಳಿಂದ ಸಮರ್ಥಿಸಿ ಸಾಬೀತು ಗೊಳಿಸಿದರು. ಅವರು ಹೇಳಿದರು, ಇಸ್ಲಾಮ್ ಮತ್ತು ಖುರ್‌ಆನ್ ಧರ್ಮದ ಅಸ್ತಿಭಾರವನ್ನು ಪ್ರಥಮ ದಿನದಿಂದಲೇ ಮಾನವೀಯ ಸಹಾನುಭೂತಿ, ಶಾಂತಿ ಮತ್ತು ಭದ್ರತೆಯ ತತ್ವಗಳ ಮೇಲೆ ಸ್ಥಾಪಿಸಲಾಗಿದೆ ಎಂದು.

ಪ್ರೊಫೆಸರ್ ಹರ್ಬರ್ಟ್ ಹೆಡೇ ಹೇಳುತ್ತಾರೆ: ಜಮಾಅತನ್ನು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಎದ್ದು ಕಾಣುವಂತೆ ಮಾಡಿ ಇತರ ಧಾರ್ಮಿಕ ಪಂಗಡಗಳಿಗಿಂತ ವೈಶಿಷ್ಟ್ಯಪೂರ್ಣ ಸ್ಥಾನದಲ್ಲಿ ನಿಲ್ಲಿಸಲಾಗಿದೆ. ಸಬೀನ್ ಲೇಡನ್ ಸಾಹಿಬ ಹೇಳುತ್ತಾರೆ:

ಅಹ್ಮದಿಯಾ ಜಮಾಅತಿನ ಇಮಾಮರು ಮಾನವರ ಮುಂದಿನ ಪೀಳಿಗೆಗಳು ಅನುಭವಿಸಬಹುದಾದ ನೋವನ್ನು ಮುಂಚಿತವಾಗಿ ಮನವರಿಕೆ ಮಾಡಿಕೊಂಡು ಇಂದಿನ ಕಾಲದ ನಾಯಕರಿಗೆ ಎಚ್ಚರಿಕೆ ನೀಡಿದ್ದಾರೆ. ಅದು ನನ್ನ ಹೃದಯದ ಮೇಲೆ ಗಾಢವಾದ ಪ್ರಭಾವ ಬೀರಿತು. ಒಬ್ಬ ಅತಿಥಿ ಮಹಿಳೆ ಹೇಳಿದರು: ಖಲೀಫರ ಭಾಷಣದಲ್ಲಿ ನನಗೆ ಬಹಳ ಮಹತ್ವಪೂರ್ಣವಾಗಿ ತೋರಿದುದು ವಿದ್ಯಾಭ್ಯಾಸ ಮತ್ತು ತರಬೇತಿಯ ಪ್ರಾಮುಖ್ಯತೆಯಾಗಿದೆ. ಏಕೆಂದರೆ ಜನರಿಗೆ ತಮ್ಮ ಪವಿತ್ರ ಗ್ರಂಥಗಳಲ್ಲಿರುವ ಉಪದೇಶಗಳ ಬಗ್ಗೆ ಸರಿಯಾದ ಜ್ಞಾನ ಲಭಿಸಿದರೆ ಅನೇಕ ಕಷ್ಟಗಳಿಂದ ನಾವು ಸುರಕ್ಷಿತರಾಗುವೆವು.

ಇಂದು ಅಹ್ಮದಿ ಯುವ ಜನರ ಹೊಣೆಗಾರಿಕೆ ಏನೆಂದರೆ ಅವರು ವಿಶಿಷ್ಟವಾಗಿ ಪವಿತ್ರ ಖುರ್‌ಆನನ್ನು ಓದಬೇಕು ಮತ್ತು ಮನವರಿಕೆ ಮಾಡಬೇಕು. ಆಗ ಅನ್ಯರಿಗೆ ಅದನ್ನು ಮನವರಿಕೆ ಮಾಡಿಕೊಡಲು ಸಾಧ್ಯವಾಗುವುದು. ಆ ಜನರು ಅದರ ಬಗ್ಗೆ ಚಿಂತಿಸಲು ಮತ್ತು ಅದರ ಔಚಿತ್ಯವನ್ನು ಮನವರಿಕೆ ಮಾಡಲು ನಿರ್ಬಂಧಿತರಾಗುವರು. ಅವರು ಆ ಉಪದೇಶಗಳನ್ನು ಕೃತಿರೂಪಕ್ಕೆ ತರುವರು ಅಥವಾ ಅವುಗಳನ್ನು ಅಂಗೀಕರಿಸುವರು.

ಅನಂತರ ಮಹದಿ ಆಬಾದ್‌ನಲ್ಲಿ ಮಸ್‌ಜಿದ್ ಉದ್ಘಾಟಿಸಲಾಯಿತು. ಆ ಸಮಾರಂಭದಲ್ಲಿ ಅಂದಾಜು 170 ಅತಿಥಿಗಳು ಭಾಗವಹಿಸಿದರು. ಒಬ್ಬ ಅತಿಥಿ ವೈಸ್ ಮೇಯರ್ ಮಹಿಳೆ ಆಗಿದ್ದರು. ಆಕೆ ಹೇಳುತ್ತಾರೆ: ನಾನು ಮರಳಿ ಹೋಗಿ ನಿಶ್ಚಯವಾಗಿಯೂ ಖಲೀಫರು ಹೇಳಿದ ಮಾತುಗಳನ್ನು ಜನರ ಮಧ್ಯೆ ಹರಡುವೆನು. ಯಾರಾದರೂ ಇಸ್ಲಾಮ್ ವಿರುದ್ಧ ಆಕ್ಷೇಪಿಸಿದರೆ ನಾನು ಖಲೀಫರ ಹೇಳಿಕೆಗಳನ್ನು ಪ್ರಸ್ತಾಪಿಸಿ ಇಸ್ಲಾಮಿನ ಪರವಾಗಿ ಪ್ರತಿರೋಧಿಸಲು ಪ್ರಯತ್ನಿಸುವೆನು.

(ಹುಝೂರ್ ಹೇಳಿದರು:) ನಮಾಝ್‌ಗಳ ನಂತರ ಒಂದು ಜನಾಝ ಗಾಯಿಬ್ ನಿರ್ವಹಿಸುವೆನು. ಅದು ಕೇರಳದ ಪಾಲ್‌ಘಾಟಿನ ಮುಬಲ್ಲಿಗ್, ಮೌಲವಿ ಮಹ್ಮೂದ್ ಅಹ್ಮದ್ ಸಾಹಿಬರದಾಗಿದೆ. ಅವರು 54ನೇ ವಯಸ್ಸಿನಲ್ಲಿ ಅಕ್ಟೋಬರ್ ದಿನಾಂಕ 15ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಪಿತ ಮುಕರ್‍ರಮ್ ಮೌಲವಿ ಕೆ. ಅಲವಿ ಸಾಹಿಬರ ಮೂಲಕ ಪ್ರವೇಶಿಸಿತು. ಅವರು ಅಹ್ಮದಿಯೇತರ ಮುಸ್ಲಿಮರ ಪ್ರಸಿದ್ಧ ವಿದ್ವಾಂಸರಾಗಿದ್ದರು. ಅವರು ಅಹ್ಮದಿಯರಾದಾಗ ಕಠಿಣ ವಿರೋಧವನ್ನು ಎದುರಿಸಬೇಕಾಯಿತು. ಅವರ ಮೂಲಕ ಕೇರಳದಲ್ಲಿ ನೂರಾರು ಜನರಿಗೆ ಅಹ್ಮದಿಯ್ಯತ್ ಸ್ವೀಕರಿಸುವ ಭಾಗ್ಯ ಲಭಿಸಿತು. ಮೌಲವಿ ಮಹ್ಮೂದ್ ಅಹ್ಮದ್ ಸಾಹಿಬರು ತನ್ನ ತಂದೆಯ ಸಲಹೆ ಮೇರೆಗೆ ಕಾಲೇಜ್ ವಿದ್ಯಾಭ್ಯಾಸ ತ್ಯಜಿಸಿ ಖಾದಿಯಾನಿನ ಜಾಮಿಅ ಅಹ್ಮದಿಯಾ ಪ್ರವೇಶಿಸಿದರು. 1988ರಲ್ಲಿ ಅವರು ಜಾಮಿಅದಿಂದ ಉತ್ತೀರ್ಣರಾದರು. ಅವರು ಬಹಳ ದೊಡ್ಡ ವಿದ್ವಾಂಸರಾಗಿದ್ದರು. ಮುತ್ತಖಿಯೂ, ನಮಾಝ್, ಉಪವಾಸಗಳನ್ನು ನಿರ್ವಹಿಸುವವರೂ ಆಗಿದ್ದರು. ತಹಜ್ಜುದ್ ನಿರ್ವಹಿಸುವವರೂ, ಪ್ರಾರ್ಥಿಸುವವರೂ ಆಗಿದ್ದರು. ಬಡವರ ಹಿತೈಷಿಯೂ ಸಹನೆ ತೋರುವವರೂ ಕೃತಜ್ಞಾ ಬದ್ಧರೂ ಆಗಿದ್ದ ನಿಷ್ಠಾವಂತ ಮನುಷ್ಯನಾಗಿದ್ದರು. ಪವಿತ್ರ ಖುರ್‌ಆನ್, ಹದೀಸ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಖಲೀಫರೆಲ್ಲರ ಗ್ರಂಥಗಳನ್ನು ಗಾಢವಾಗಿ ಅಧ್ಯಯನ ಮಾಡುವವರಾಗಿದ್ದರು. ಅರಬಿ, ಉರ್ದು, ಮಲಯಾಳಂ ಮತ್ತು ತಮಿಳು ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು. ಅವರ ಸ್ವಂತ ಲೈಬ್ರರಿಯಲ್ಲಿ ಅಸಂಖ್ಯಾತ ಅಪೂರ್ವ ಗ್ರಂಥಗಳಿದ್ದುವು. ಕೇರಳ, ತಮಿಳುನಾಡು, ಲಕ್ಷದ್ವೀಪ ಹಾಗೂ ಕುವೈತ್‌ನಲ್ಲಿ ಜಮಾಅತಿಗೆ ಸೇವೆ ಮಾಡುವ ಭಾಗ್ಯ ಅವರಿಗೆ ಲಭಿಸಿತ್ತು. ಅವರು ಉತ್ತಮ ಭಾಷಣಗಾರರೂ ವಾದ ಪ್ರತಿವಾದ ನಿಪುಣರೂ ಆಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲರವರ ನಿರ್ದೇಶ ಪ್ರಕಾರ 1994ರಲ್ಲಿ ಮುಹ್ತರಮ್ ಮೌಲಾನ ದೋಸ್ತ್ ಮುಹಮ್ಮದ್ ಶಾಹಿದ್ ಮತ್ತು ಹಾಫಿಝ್ ಮುಝಫ್ಫರ್ ಅಹ್ಮದ್ ಸಾಹಿಬರೊಂದಿಗೆ ಸೇರಿ ನಮ್ಮ ಜಮಾಅತಿನ ಒಬ್ಬ ಕಠಿಣ ವಿರೋಧಿ ಮೌಲವಿ ವಿರುದ್ಧ ಸಂವಾದ ನಡೆಸುವ ಭಾಗ್ಯ ಸಹ ಅವರಿಗೆ ಲಭಿಸಿತ್ತು. ಅವರು ಮೂಸಿ ಆಗಿದ್ದರು. ಅವರು ಇಬ್ಬರು ಪತ್ನಿಯರನ್ನೂ ಮೂವರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಅವರ ಇಬ್ಬರು ಅಳಿಯಂದಿರು ಅಲ್ಲಾಹನ ಅನುಗ್ರಹದಿಂದ ವಾಕಿಫೆ ಝಿಂದಗಿಗಳಾಗಿದ್ದಾರೆ. ಅವರ ಒಬ್ಬ ಅಳಿಯ ಬರೆಯುತ್ತಾರೆ: ಜಾಮಿಅದ ಕೊನೆಯ ವರ್ಷ ವಾರ್ಷಿಕ ರಜೆಯ ಕಾಲದಲ್ಲಿ ತಮ್ಮ ಪಿತನ ಸಲಹೆ ಪ್ರಕಾರ ಅವರು ಮನೆಗೆ ಹೋಗದೆ ಎರಡು ತಿಂಗಳ ಕಾಲ ಖಾದಿಯಾನ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಮಾತ್ರ ಅಧ್ಯಯನ ಮಾಡಲು ವಿನಿಯೋಗಿಸಿದರು. ಜಾಮಿಅದ ವಿದ್ಯಾರ್ಥಿಗಳಿಗೆ ಇದು ಒಂದು ದೊಡ್ಡ ಅನುಕರಣೀಯ ಉದಾಹರಣೆಯಾಗಿದೆ. 1998 ಮತ್ತು 2015ರಲ್ಲಿ ಅಂಜುಮನ್ ಇಶಾಅತೆ ಇಸ್ಲಾಮ್ ವಿರುದ್ಧ ನಮ್ಮ ಜಮಾಅತ್ ವತಿಯಿಂದ ಚಾರಿತ್ರಿಕ ವಾದ–ಪ್ರತಿವಾದಗಳು ಜರಗಿದುವು. ಅವುಗಳಲ್ಲಿ ಜಮಾಅತಿನ ಪರವಾಗಿ ಭಾಗವಹಿಸಿದವರು ಅವರಾಗಿದ್ದರು. ಇದಲ್ಲದೆ ಅಹ್ಲೆ ಖುರ್‌ಆನ್ ಮತ್ತು ಅಹ್ಲೆ ಹದೀಸ್ ಪಂಗಡಗಳ ವಿರುದ್ಧ ಸಹ ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಪರವಾಗಿ ಸಂವಾದ ನಡೆಸುವ ಭಾಗ್ಯ ಅವರಿಗೆ ಲಭಿಸಿತ್ತು. ಅವರು ನಮಾಝ್ ಮತ್ತು ಉಪವಾಸದ ಬಗ್ಗೆ ನಿಷ್ಠಾವಂತರಾಗಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ತಹಜ್ಜುದ್ ನಿರ್ವಹಿಸುತ್ತಿದ್ದರು. ಅವರ ಅಳಿಯ ಬರೆಯುತ್ತಾರೆ: ಬಾಲ್ಯದ ಒಂದು ಘಟನೆ ಹೀಗೆ ವಿವರಿಸಲಾಗುತ್ತಿದೆ: ಒಮ್ಮೆ ಅವರಿಗೆ ತಹಜ್ಜುದ್ ನಮಾಝ್ ನಿರ್ವಹಿಸಲು ಸಾಧ್ಯವಾಗಲಿಲ್ಲ. ಆಗ ಅವರ ತಂದೆ ಹೇಳಿದರು: ಕಂದಾ ನಿನಗೆ ಮಖಾಮೆ ಮಹ್‌ಮೂದ್ ಲಭಿಸಬೇಕೆಂದು ನೀನು ಇಚ್ಛಿಸುವುದಿಲ್ಲವೇ? ಹಾಗೆ ಅವರು ಈ ಉಪದೇಶವನ್ನು ನೆನಪಿಟ್ಟುಕೊಂಡು ಜೀವಿತಾದ್ಯಂತ ಅದರ ಪ್ರಕಾರ ವರ್ತಿಸಿದರು. ರೋಗಬಾಧಿತರಾಗಿ ಬಹಳ ಬಲಹೀನರಾಗಿದ್ದ ಸ್ಥಿತಿಯಲ್ಲಿ ಸಹ ಅವರು ತಹಜ್ಜುದ್ ನಿರ್ವಹಿಸುತ್ತಿದ್ದರು. ಅವರಿಗೆ ಖಿಲಾಫತ್ ಬಗ್ಗೆ ಹೃತ್ಪೂರ್ವಕ ಪ್ರೀತಿ ಮತ್ತು ನಿಷ್ಠೆ ಇತ್ತು. ಅವರು ಗಾಢವಾದ ಸಂಬಂಧ ಖಿಲಾಫತ್‌ನೊಂದಿಗೆ ಹೊಂದಿದ್ದರು. ಶೈಕ್ಷಣಿಕ, ತರಬೇತಿ ಸಂಬಂಧವಾದ, ತಬ್ಲೀಗ್ ಸಂಬಂಧವಾದ ಸಭೆಗಳಲ್ಲಿ ಅವರು ಖಿಲಾಫತ್ ಬಗ್ಗೆ ವಿಶಿಷ್ಟವಾಗಿ ದೀರ್ಘವಾಗಿ ಪ್ರಸ್ತಾಪಿಸುತ್ತಿದ್ದರು. ಅವರು ಆ ವಿಷಯದ ಬಗ್ಗೆ ಮಾತನಾಡುವಾಗ ಭಾವಪರವಶರಾಗುತ್ತಿದ್ದರು. 2015ರಲ್ಲಿ ಒಬ್ಬ ಮಹಿಳೆ ತನ್ನ ಮಕ್ಕಳೊಂದಿಗೆ ಅಹ್ಮದಿಯರಾದರು. ಅವರ ಪತಿ ಆಗ ವಿದೇಶದಲ್ಲಿದ್ದರು. ಅವರು ಮರಳಿ ಬಂದಾಗ ಅವರಿಗೆ ತಬ್ಲೀಗ್

ಮಾಡಿದಾಗ ಅವರು ಒಂದು ಪ್ರಶ್ನೆ ಕೇಳಿದರು. ಖಿಲಾಫತನ್ನು ನಂಬುವ ಆವಶ್ಯಕತೆ ಏನಿದೆ? ಆಗ ಮೌಲವಿ ಸಾಹಿಬ್ ಖಿಲಾಫತ್ ಸ್ಥಾನದ ಬಗ್ಗೆ, ಖಿಲಾಫತ್ತಿನ ಮಹತ್ವ ಮತ್ತು ಅನುಗ್ರಹಗಳ ಬಗ್ಗೆ ಎಷ್ಟು ಭಾವಪರವಶರಾಗಿ ಮಾತನಾಡಿದರೆಂದರೆ ಅವರು ಅಶ್ರುಭರಿತರಾಗಿದ್ದರು. ಆ ಅಹ್ಮದಿಯೇತರ ವ್ಯಕ್ತಿಯ ಮೇಲೆ ಅವರ ಮಾತುಗಳು ಎಷ್ಟು ಪ್ರಭಾವ ಬೀರಿತೆಂದರೆ ಅವರು ತಕ್ಷಣ ಬೈಅತ್ ಮಾಡಿದರು.

ವಾಸ್ತವಿಕವಾಗಿ ಅವರು ಖಿಲಾಫತ್‌ಗೆ ಸುಲ್ತಾನ್ ನಸೀರ್ (ಬಲಿಷ್ಠ ಸಹಾಯಕ) ಆಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸುವವನಾಗಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು ಅವರ ಒಳಿತುಗಳನ್ನು ಜಾರಿಯಲ್ಲಿರಿಸುವ ಭಾಗ್ಯ ಅಲ್ಲಾಹನು ನೀಡಲಿ – ಆಮೀನ್.

*****

اَلْحَمْدُ لِلّٰہِ نَحْمَدُہٗ وَ نَسْتَعِیْنُہٗ وَ نَسْتَغْفِرُہٗ وَنُؤْمِنُ بِہٖ وَ نَتَوَکَّلُ
عَلَیْہِ وَنَعُوْذُ بِاللّٰہِ مِنْ شُرُوْرِ اَنْفُسِنَا وَ مِنْ سَیِّئَاتِ اَعْمَالِنَا مَنْ
یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ فَلَا ھَادِیَ لَہٗ - وَ نَشْھَدُ اَنْ لَّا
اِلٰہَ اِلَّا اللّٰہُ وَ نَشْھَدُ اَنَّ مُحَمَّدًا عَبْدُہٗ وَرَسُوْلُہٗ - عِبَادَ اللّٰہِ رَحِمَکُمُ
اللّٰہُ اِنَّ اللّٰہَ یَاْمُرُ بِالْعَدْلِ وَ الْاِحْسَانِ وَ اِیْتَاءِ ذِی الْقُرْبٰی وَ یَنْھٰی
عَنِ الْفَحْشَاءِ وَ الْمُنْکَرِ وَ الْبَغْیِ یَعِظُکُمْ لَعَلَّکُمْ تَذَکَّرُوْنَ
اُذْکُرُوا اللّٰہَ یَذْکُرْکُمْ وَ ادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ -

***Friday Sermon delivered by Hadrath Khaleefatul Masih Al Khamis***(atba)
*At, Masjid Mubarak, Islamabad, Tilford, U.K. On 01-11-2019*
**Summarized by** *Majlis Ansarullah Bharat*
***Kannada Translation:*** M. Ubeidullah for Kannada Desk, Qadian
***Reviewed by:*** M.P Ibrahim |***Typing:*** U Basheer Ahmad
***Published By:*** Kannada Isha'at Team for Nazarath Nashr-O-Isha'ath, Qadian
***Email:*** *khutuba.kannada@gmail.com*
**You can find all the Sermons archived at:** www.alislam.org/friday-sermon